ಭಾರತದ ಬುಟ್ಟಿಗೆ ಬಂದು ಬೀಳುವಂತೆ ಮಾಡಿದ್ದರು. ಪರಿಸ್ಥಿತಿ ಹೀಗಿದ್ದೂ ಪಾಕಿಸ್ತಾನ ತಂಡವು ರವೂಫ್ ಅವರ ಕಿಚ್ಚನ್ನೇ ಬಂಡವಾಳವಾಗಿಸಿಕೊಂಡು ಅವರಿಗೆ ಮಹತ್ವದ ಓವರ್‌ಗಳನ್ನು ನೀಡಿದ್ದು ಆ ತಂಡಕ್ಕೆ ಮುಳುವಾಯಿತು. ಗೆಲುವಿನ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸಿಕೊಂಡಿದ್ದರೂ ಪಾಕಿಸ್ತಾನ ಅದನ್ನು ತನ್ನದಾಗಿಸಿಕೊಳ್ಳಲು ಆಗಲಿಲ್ಲ. ಭಾರತದ ತಿಲಕ್ ವರ್ಮಾ ತಾಳ್ಮೆಯ ಮೂರ್ತಿಯಂತೆ ನಿಂತು, ಎಸೆತಗಳಿಗೆ ತಕ್ಕಂತೆ ಆಡುತ್ತಾ ಹೋದದ್ದು ಭಾರತದ ವೃತ್ತಿಪರತೆಗೆ ಸಾಕ್ಷಿ. ಮಧ್ಯಮ ಕ್ರಮಾಂಕದಲ್ಲಿ ಇಂತಹ ಬ್ಯಾಟ್ಸ್‌ಮನ್ ಅವಶ್ಯಕತೆ ಭಾರತಕ್ಕೆ ಈಗ ಅಗತ್ಯವಿತ್ತು.



ಸೂರ್ಯಕುಮಾರ್, ಕುಲದೀಪ್ ಯಾದವ್

ಏಷ್ಯಾ ಕಪ್ ಕ್ರಿಕೆಟ್ ಫೈನಲ್ ಪಂದ್ಯದ ಕುರಿತು ಹೀಗೆಲ್ಲ ಬಗೆದುನೋಡುವ ಕ್ಷಣಗಳು ನಮ್ಮ ಪಾಲಿಗೆ ಇದ್ದವು. ಆದರೆ, ಅವೆಲ್ಲವನ್ನೂ ಕಸಿದುಕೊಂಡದ್ದು ಸೂರ್ಯಕುಮಾರ್ ಹಾಗೂ ಪಾಕಿಸ್ತಾನದ ಆಟಗಾರರು ಮಾಡಿದ ಹೈ ಡ್ರಾಮಾ. ಕೊನೆಯಲ್ಲಿ ನಕ್ವಿ ಕಪ್ ಎತ್ತಿಕೊಂಡು ಹೋದ ಕುಚೇಷ್ಟೆಯ ಕೊಸರು. ಭಾರತ ಹಾಗೂ ಪಾಕಿಸ್ತಾನದ ನಡುವಿನ ರಾಜತಾಂತ್ರಿಕ ಸಂಬಂಧ ಮೊದಲಿನಿಂದಲೂ ಸರಿಯಾಗಿಲ್ಲ. ಪಹಲ್ಗಾಮ್ ದಾಳಿಯ ನಂತರ ನಡೆದ 'ಆಪರೇಷನ್ ಸಿಂಧೂರ' ಭಾರತದ ಎಷ್ಟೋ ಮಂದಿಯ ನರನಾಡಿಗಳಲ್ಲಿ ವೀರಾವೇಶವನ್ನು ತುಂಬಿದೆ. ಪಾಕಿಸ್ತಾನದೊಟ್ಟಿಗೆ ಯಾವ ರೀತಿಯ ಕ್ರಿಕೆಟ್ಟನ್ನೂ ಆಡುವುದಿಲ್ಲ ಎಂದು ಆಗ ಅದೇ ವೀರಾವೇಶದಲ್ಲಿ ಆಯಕಟ್ಟಿನ ಜಾಗದಲ್ಲಿ ಇದ್ದವರೂ ನುಡಿದಿದ್ದರು. ಆದರೆ, ಏಷ್ಯಾ ಕಪ್ ನಡೆಯುವ ತಟಸ್ಥ ಸ್ಥಳದಲ್ಲಿ ಭಾರತವು ಪಾಕಿಸ್ತಾನದ ಎದುರು ಆಡಲು ಸಾಧ್ಯವಿಲ್ಲ ಎಂದು ಹೇಳಲು ಆಗಲಿಲ್ಲ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆ ರೀತಿ ಹೇಳುವ ಪ್ರಯತ್ನವನ್ನೂ ಮಾಡಲಿಲ್ಲ.

ಇಂಡಿಯನ್ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಅಧ್ಯಕ್ಷರಾಗಿರುವ ಜಯ್ ಶಾ ಕೂಡ ಗಪ್‌ಚುಪ್.

ಕ್ರಿಕೆಟ್ ಅಂದರೆ ಭರ್ಜರಿ ಹಣ. ಸುತ್ತ ಹುತ್ತದಂತೆ ನಿಂತಿರುವ ಮಾರುಕಟ್ಟೆಯ ಲೆಕ್ಕಾಚಾರ. ಅವೆರಡೂ ಆಡಿಸಿದಂತೆ ಆಡಬೇಕು. ಅದೇ ಕಾರಣಕ್ಕೆ ಸೂರ್ಯಕುಮಾರ್, ಪಾಕ್ ಎದುರು ತಮ್ಮ ತಂಡ ಕಟ್ಟಿಕೊಂಡು ಆಡಿದರು. ಮೂರು ಪಂದ್ಯಗಳನ್ನು ಗೆದ್ದರು. ಒಂದರಲ್ಲೂ ಅವರು ಚೆನ್ನಾಗಿ ಆಡಲಿಲ್ಲ. ಅಭಿನಯವೊಂದನ್ನು ವಿಪರೀತ ಎನ್ನುವಷ್ಟು ತುಳುಕಿಸಿದರು. ಇದೇ ನಕ್ವಿಗೆ ಅವರು ಕೈಕುಲುಕಿ, ಔತಣಕೂಟದಲ್ಲಿ ಕುಳಿತೆದ್ದು ಬಂದಿದ್ದ ವಿಡಿಯೊಗಳು ಆಮೇಲೆ ಹರಿದಾಡಿದವು.



ಕ್ರೀಡಾಸ್ಫೂರ್ತಿ ಇರುವ ಯಾರೇ ಆದರೂ ಇಂತಹ ನಟನೆಯನ್ನು ಒಪ್ಪಲಾರರು. 1983ರಲ್ಲಿ ಭಾರತಕ್ಕೆ ವಿಶ್ವಕಪ್ ಗೆದ್ದು ತಂದಿದ್ದ ನಾಯಕ ಕಪಿಲ್ ದೇವ್ ಕೂಡ ಅದೇ ಕಾರಣಕ್ಕೆ ರಾಜಕೀಯವನ್ನು ಆಟದಂಗಳಕ್ಕೆ ತರಬೇಡಿ ಎಂದು ಕಿವಿಮಾತು ಹೇಳಿದ್ದು. ಹಳೆಯ ದಿಗ್ಗಜ ಕ್ರಿಕೆಟರ್‌ಗಳು ಆಟಕ್ಕೆ ಕೊಟ್ಟ ಕಾಣ್ಕೆಯನ್ನು ಸ್ಮರಿಸಿದ್ದು. ಅವರ ವಸ್ತುನಿಷ್ಠ ಹೇಳಿಕೆಗೆ ಕೆಲವರು ಟೀಕೆ ಮಾಡಿದ್ದು ಈ ಹೊತ್ತಿನ ಇನ್ನೊಂದು ಜನಪ್ರಿಯ ಮನಃಸ್ಥಿತಿಯನ್ನು ಕಾಣಿಸುತ್ತದೆ.

ಮೈದಾನದಲ್ಲಿ ಆಟವಾಡಿದ ಮೇಲೆ ಕೈಕುಲುಕುವುದು ಒಪ್ಪಿತ ರಿವಾಜು. ಅದನ್ನು ಮಾಡುವುದಿಲ್ಲ ಎಂದು ಚಿಕ್ಕ ಮಕ್ಕಳಂತೆ ಸೂರ್ಯಕುಮಾರ್ ಹೇಳಿದ್ದು ಗಲ್ಲಿ ಕ್ರಿಕೆಟ್‌ನ ಹತಾಶ ಆಟಗಾರರ ಧೋರಣೆಗೆ ಸಮ. ಅಂತೆಯೇ ನಕ್ವಿ ಕಪ್ ಎತ್ತಿಕೊಂಡು ಹೋಗಿದ್ದು, ಮೊಂಡಾಟವಾಡುವ ಮಕ್ಕಳು ತಮ್ಮ ಕ್ರಿಕೆಟ್ ಕಿಟ್ ಅನ್ನು ಚೆನ್ನಾಗಿ ಆಡುವ ಸ್ನೇಹಿತರಿಗೆ ಕೊಡುವುದಿಲ್ಲ ಎಂದು ಹಟಕ್ಕೆ ಬೀಳುವ ರೀತಿಯ ನಡೆ.

1983ರ ವಿಶ್ವಕಪ್ ಕ್ರಿಕೆಟ್ ಗೆದ್ದು ತಂದ ತಂಡದಲ್ಲಿ ವಿಕೆಟ್‌ಕೀಪರ್ ಆಗಿದ್ದ ಸೈಯದ್ ಕಿರ್ಮಾನಿ ಅವರೂ ಕಪಿಲ್ ದೇವ್ ಹೇಳಿಕೆಯನ್ನು ಸಮರ್ಥಿಸುವಂತೆ ಮಾತನಾಡಿದರು. ಆಟ ಪ್ರೀತಿ ಇರುವ ಅನುಭವಿಯ ಸಹಜವಾದ ನುಡಿ ಅದು.

ಪಂಜಾಬ್‌ನ ಚಿಕ್ಕಪ್ರಾಯದ ಅಭಿಷೇಕ್ ಶರ್ಮಾ ಎಲ್ಲರಿಗಿಂತ ಅತಿ ಹೆಚ್ಚು 314 ರನ್‌ಗಳನ್ನು 200ರ ಸ್ಟ್ರೈಕ್‌ರೇಟ್‌ನಲ್ಲಿ ಹೊಡೆದದ್ದು, ಭಾರತ ನಾಯಕ ಸೂರ್ಯಕುಮಾರ್ ಯಾದವ್ ಪಾಕಿಸ್ತಾನದ ಶಾಹೀನ್ ಆಫ್ರಿದಿಗಿಂತ ಟೂರ್ನಿಯಲ್ಲಿ ಕಡಿಮೆ ರನ್ ಗಳಿಸಿದ್ದು (ಆಫ್ರಿದಿ 83, ಸೂರ್ಯ 72), ಕುಲದೀಪ್ ಯಾದವ್ 17 ವಿಕೆಟ್ ಪಡೆದಿದ್ದು, ಆಫ್ರಿದಿ ಮೊದಮೊದಲ ಹಿನ್ನಡೆಯ ನಂತರವೂ 10 ವಿಕೆಟ್ ಗಳಿಸಿದ್ದು, ಹ್ಯಾರಿಸ್ ರವೂಫ್ ಪ್ರತಿ ಓವರ್‌ಗೆ 9 ರನ್‌ಗಳಂತೆ ಕೊಟ್ಟಿದ್ದು...

ಇವೆಲ್ಲವೂ ಚರ್ಚಿತವಾಗಬೇಕಾದ, ವಿಶ್ಲೇಷಣೆಗೆ ಒಳಗಾಗಬೇಕಾದ ಅಂಕಿಅಂಶ. ಶುಭಮನ್ ವೈಫಲ್ಯ, ಬೂಮ್ರಾ ಲಯ ತಪ್ಪಿದ ಸ್ಥಿತಿ, ಅಭಿಷೇಕ್ ಶರ್ಮಾ ಮಹತ್ವದ ಹಂತದಲ್ಲಿ ಬೇಗ ಪೆವಿಲಿಯನ್‌ಗೆ ಹೋದದ್ದು... ಇವೆಲ್ಲ ಕೊರತೆಗಳನ್ನೂ ಮೀರಿ ಭಾರತ ಕಪ್ ಎತ್ತಿಹಿಡಿದದ್ದೂ ಗಮನಿಸಬೇಕಾದ ಸಂಗತಿ. ಆದರೆ, ಅಭಿನಯಶೂರರು ಇವನ್ನೆಲ್ಲ ಮಣ್ಣುಪಾಲು ಮಾಡಿದ್ದಾರೆ. ■


